# ಊರುಕೇರಿಯ ಹೋರಾಟದ ನೆಲೆಗಳು.

**ಡಾ. ಲಕ್ಷ್ಮಿನರಸಮ್ಮ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುಣಿಗಲ್–572 130.

**Article Link: https://aksharasurya.com/2023/08/lakshminarasamma/**

**ABSTRACT:**

ಡಾ. ಸಿದ್ದಲಿಂಗಯ್ಯನವರು ಬರೆದಿರುವ 'ಊರುಕೇರಿ' ಎಂಬ ಆತ್ಮಚರಿತ್ರೆಯಲ್ಲಿ ಹೋರಾಟಗಳು ಮುಖ್ಯವಾಗಿದ್ದು, ದಲಿತರ ಹಾಗೂ ಬಡ ಜೀವಿಗಳ ಪರ ನಿಂತು ಎಲ್ಲ ರೀತಿಯ ಸೌಲಭ್ಯಗಳನ್ನು ಕೊಡಿಸುವಲ್ಲಿ ಲೇಖಕರು ಮುಂದಾಗಿದ್ದಾರೆ. ಲೇಖಕರು ಬಡವರ ಶಕ್ತಿ ಯಾವುದೆಂದರೆ ಹೋರಾಟವೆಂದು ತಿಳಿಸಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ನಡೆದ ಸಮಾವೇಶದಲ್ಲಿ ದಲಿತರು ಘೋಷಣೆಗಳನ್ನು ಕೂಗುತ್ತಾ ಮುನ್ನಡೆಯುತ್ತಾರೆ. ಈ ಹೋರಾಟದಲ್ಲಿ ಸಿದ್ಧಲಿಂಗಯ್ಯನವರು ಸಾಮಾನ್ಯ ವ್ಯಕ್ತಿಯಂತೆ ನಡೆದುಕೊಳ್ಳುತ್ತಾರೆ. ಲೇಖಕರು ಬಿ. ಬಸವಲಿಂಗಪ್ಪನವರ ಭೂಸಾ ಚಳುವಳಿಯಲ್ಲಿ ಭಾಗವಹಿಸಿ ಕನ್ನಡ ಸಾಹಿತ್ಯದಲ್ಲಿ ಬಹಳಷ್ಟು ಭೂಸ ಇದೆ, ಅದರಲ್ಲಿ ಯಾವ ಹುರುಳಿಲ್ಲ ಎಂದು ಹೇಳುವ ಮೂಲಕ ಬಸವಲಿಂಗಪ್ಪನವರ ಪರವಾಗಿ ವಾದಿಸುತ್ತಾರೆ. ಹೋರಾಟ ಮಾಡುವುದೆಂದರೆ ಕೇವಲ ಘೋಷಣೆ ಕೂಗುವುದು ಮಾತ್ರವಲ್ಲ ಆತಸ್ಥೈರ್ಯವನ್ನು ಹೊಂದಬೇಕು ಎಂಬುದಾಗಿ ಲೇಖಕರು ವ್ಯಕ್ತಪಡಿಸಿದ್ದಾರೆ. ಬೆಳಗಾವಿ ಹೋರಾಟದಲ್ಲಿ ಪ್ರಾಣವನ್ನು ಬೇಕಾದರೂ ಕೊಡುತ್ತೇವೆ ಎಂಬ ಘೋಷಣೆಯನ್ನು ಊರುಕೇರಿಯಲ್ಲಿ ವ್ಯಕ್ತಪಡಿಸಿದ್ದಾರೆ. ಲೇಖಕರು ದಲಿತರು ಮತ್ತು ದಲಿತೇತರಾರು ನಡುವೆ ವೈಷ್ಯಮ್ಯ ಉಂಟಾದಾಗ ಯಾವುದೇ ರೀತಿಯ ಘರ್ಷಣೆಗಳು ಆಗದಂತೆ ಅವರಿಬ್ಬರಿಗೂ ಸಮಾಧಾನ ಮಾತುಗಳನ್ನು ಹಾಡಿ ಶಾಂತಿಯನ್ನು ಮೂಡಿಸುತ್ತಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದಲಿತನ ಮೇಲೆ ಆದಂತಹ ದೌರ್ಜನ್ಯವನ್ನು ಕಂಡು ಸಮಾಧಾನ ನೀಡುತ್ತಾರೆ. ಸಿದ್ದಲಿಂಗಯ್ಯನವರ 'ಊರಿಕೇರಿ' ಆತ್ಮಚರಿತ್ರೆಯಲ್ಲಿ ಹೋರಾಟದ ಸಂದರ್ಭಗಳು ಹೇರಳವಾಗಿವೆ. ಬದುಕಿನಲ್ಲಿ ಬಡವರೆಲ್ಲರೂ ಒಂದುಗೂಡಿ ಹೋರಾಟ ಮಾಡಲೇಬೇಕೆಂದು ತಿಳಿಸಿದ್ದಾರೆ.

**KEYWORDS:** ಊರುಕೇರಿ, ಆತ್ಮಚರಿತ್ರೆ, ಹೋರಾಟ, ಭೂಸಾ ಚಳುವಳಿ, ಖಡ್ಗವಾಗಲಿ ಕಾವ್ಯ, ಸಮಾವೇಶ.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆಯಲ್ಲಿ ಬಡಕುಟುಂಬದ ದೇವಯ್ಯ ಮತ್ತು ವೆಂಕಟಮ್ಮ ದಂಪತಿಗಳ ಮಗನಾಗಿ ಜನಿಸಿದ ಡಾ. ಸಿದ್ದಲಿಂಗಯ್ಯನವರು ಸಾವಿರಾರು ನದಿಗಳು, ಹೊಲೆಮಾದಿಗರ ಹಾಡು ಕವನ ಸಂಕಲನಗಳಿಂದ ಜನಮಾನಸದಲ್ಲಿ ಜನಪ್ರಿಯರಾಗಿದ್ದಾರೆ. ಇವರು ಕಪ್ಪು ಕಾಡಿನ ಹಾಡು, ಮೆರವಣಿಗೆ, ನನ್ನ ಜನಗಳು ಮತ್ತು ಇತರ ಕವಿತೆಗಳು ಇತ್ಯಾದಿ ಕವನ ಸಂಕಲನಗಳು, ಪಂಚಮ ಮತ್ತು ನೆಲಸಮ, ಏಕಲವ್ಯ ನಾಟಕಗಳು, ಅವತಾರಗಳು ಎಂಬ ಪ್ರಬಂಧ, ಹಕ್ಕಿನೋಟ, ಎಡಬಲ, ಉರಿಕಂಡಾಯ, ಜನಸಂಸ್ಕೃತಿ ಲೇಖನ ಸಂಗ್ರಹಗಳು, ಊರುಕೇರಿ ಭಾಗ–1, ಊರುಕೇರಿ ಭಾಗ–2 ಎಂಬ ಆತ್ಮಕಥೆಗಳು, ಸದನದಲ್ಲಿ ಸಿದ್ದಲಿಂಗಯ್ಯ ಭಾಗ–1, ಎಂಬ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಗ್ರಾಮದೇವತೆಗಳು ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಡಾಕ್ಟರೇಟ್ ಪದವಿಯನ್ನು ಪಡೆದು ಕನ್ನಡ ಸಾಹಿತ್ಯಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿ, ಡಾ. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಪ್ರಶಸ್ತಿ, ಸತ್ಯಶಾಮ ಪ್ರತಿಷ್ಠಾನ ಪ್ರಶಸ್ತಿ, ನಾಡೋಜ ಪ್ರಶಸ್ತಿಗಳೆಂಬ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಡಾ. ಸಿದ್ದಲಿಂಗಯ್ಯನವರು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ಅವರ ನಗುಮುಖ, ಹಾಸ್ಯ, ಕಾವ್ಯ, ಹೋರಾಟದ ಪ್ರಸಂಗಗಳು ನಮ್ಮ ಮನದಾಳದಲ್ಲಿ ಹಾಸುಹೊಕ್ಕಾಗಿವೆ ಎಂದರೆ ತಪ್ಪಾಗಲಾರದು. ಲೇಖಕರು "ಊರುಕೇರಿ" ಆತ್ಮಚರಿತ್ರೆಯಲ್ಲಿನ ಹೋರಾಟ, ಹಾಸ್ಯ, ಭಾಷಣ, ಕವಿಗಳ ಪ್ರಶಂಸೆಗಳು, ಬಾಲ್ಯದ ಪ್ರಸಂಗಗಳನ್ನು ನಿರೂಪಿಸುತ್ತಾ ಚಳುವಳಿ, ಹೋರಾಟ, ಬಡತನದ ನೋವು, ಪ್ರೇಮಿಗಳ ಪ್ರಸಂಗ, ಕಾವ್ಯ ರಚನೆಯ ಬಗೆ ಪ್ರಸಿದ್ದ ಕವಿಗಳೊಂದಿಗಿನ ಒಡನಾಟ ಮೊದಲಾದವುಗಳನ್ನು ಅಭಿವ್ಯಕ್ತಿಪಡಿಸಿದ್ದಾರೆ.

ಊರುಕೇರಿ ಓದುಗರಿಗೆ ಮತ್ತೆ ಮತ್ತೆ ಓದುವಂತೆ ಪ್ರೇರೇಪಿಸುವ ಕೃತಿಯಾಗಿದೆ. ಎಲ್ಲಾ ಕಾಲಕ್ಕೂ ಶೋಷಣೆಯ ವಿರುದ್ದ ಬಂಡಾಯ ಏಳುವಂತೆ ಪ್ರತಿನಿಧಿಸುವ ಶಕ್ತಿಯನ್ನು ಊರುಕೇರಿ ಆತ್ಮಕಥೆಯಲ್ಲಿ ನೋಡಬಹುದು. ಹೋರಾಟದ ಮುಖೇನ ನೆಮ್ಮದಿಯ ಬದುಕು ಕಟ್ಟಲು ಸಾಧ್ಯ ಎಂಬ ನಿಲುವನ್ನು ಊರುಕೇರಿಯಲ್ಲಿ ನಿರೂಪಿಸಿದ ಡಾ. ಸಿದ್ದಲಿಂಗಯ್ಯನವರು ಅಜರಾಮರ. ಹೋರಾಟವು ಬಡವರ ಶಕ್ತಿ ಎನ್ನುವುದು ಅಕ್ಷರ ಸತ್ಯ. ಖ್ಯಾತ ವಿಮರ್ಶಕರಾದ ಡಿ. ಆರ್. ನಾಗರಾಜು ಅವರು ಸಿದ್ದಲಿಂಗಯ್ಯನವರ ಕಾವ್ಯ ಚಳುವಳಿ ಬದುಕು ಎಂಬ ತ್ರಿವಳಿಯನ್ನು ಕಂಡು "ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿದ ಪ್ರಾಣ ಮಿತ್ರ" ಎಂಬ

ಘೋಷಣೆಯೊಂದಿಗೆ ಕೆಟ್ಟ ವ್ಯವಸ್ಥೆಯನ್ನು ಬದಲಿಸುವ ಶಕ್ತಿ ಸಿದ್ದಲಿಂಗಯ್ಯನವರ ಕಾವ್ಯಕ್ಕಿದೆ ಎಂಬ ನೆಲೆಯನ್ನು ಮೂಡಿಸಿದ್ದಾರೆ. ಸಿದ್ದಲಿಂಗಯ್ಯನವರು ವಿದ್ಯಾರ್ಥಿಯಾಗಿರುವಾಗಲೇ ಡಾ. ಬಿ. ಆರ್. ಅಂಬೇಡ್ಕರ್, ಕಾರ್ಲ್‌ಮಾರ್ಕ್ಸ್, ಪೆರಿಯಾರ್, ಲೋಹಿಯಾ ಮೊದಲಾದವರ ಬದುಕು ಹೋರಾಟಗಳಿಂದ ಪ್ರಭಾವಿತರಾಗಿ ಜನಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಷ್ಟೇ ಅಲ್ಲದೇ ಬಹಳ ವರ್ಷಗಳ ಕಾಲ ನಿರಂತರವಾಗಿ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ಅಲಕ್ಷಿತ ಸಮುದಾಯಗಳ ನಾಯಕರಾಗಿ ಹೋರಾಡಿದ ರೀತಿ ಚಿರಸ್ಮರಣೀಯವಾದದ್ದು. ಶೋಷಣೆಗೊಳಪಟ್ಟ ಸಮುದಾಯಗಳ ಸಮಸ್ಯೆ ಮತ್ತು ಸವಾಲುಗಳನ್ನು ಕೃತಿಗಳ ಮೂಲಕ ಪರಿಚಯಿಸಿದ್ದಾರೆ. ಡಾ. ಸಿದ್ದಲಿಂಗಯ್ಯನವರ ಸಾಹಿತ್ಯವು ಮತ್ತು ಹೋರಾಟಗಳ ಮೂಲಕ ಶೋಷಿತ ಸಮುದಾಯಗಳ ನೋವುಗಳನ್ನು ಬಿಂಬಿಸುವ ಜನಧ್ವನಿಯಾಗಿದೆ.

ಹೋರಾಟದ ಕವಿ ಸಿದ್ದಲಿಂಗಯ್ಯನವರು ಬಡವರ ಪರ ನಿಂತು ತಾವೇ ಹೋರಾಟದಲ್ಲಿ ಭಾಗಿಯಾಗಿ ಜನರ ನಡುವೆ ಘರ್ಷಣೆಯಾಗದ ರೀತಿಯಲ್ಲಿ ಸಂಧಾನ ಮಾಡುವುರೊಂದಿಗೆ ಶಾಂತಿ ನೆಲೆಸುವಂತೆ ಮಾಡುತ್ತಿದ್ದರು. ನಾನು ಕಂಡಂತೆ ಡಾ. ಸಿದ್ದಲಿಂಗಯ್ಯನವರು ದಲಿತರ ಪರ ಮಾತ್ರವಲ್ಲ, ಹಿಂದುಳಿದ ವಂಗಡಗಳ ಆಗು ಹೋಗುಗಳನ್ನು ಗಮನಿಸಿ ಅವರ ಸಮಸ್ಯೆಗಳನ್ನು ಬಗೆಹರಿಸಿ ಮಾರ್ಗದರ್ಶನವನ್ನು ನೀಡುತ್ತಿದ್ದರು. ಕಾವ್ಯವನ್ನು ಖಡ್ಗವಾಗಿಸಿಕೊಂಡು ಸಾಮಾಜಿಕ ಸಮಾನತೆಯನ್ನು ತರಲೇಬೇಕೆಂಬ ಹಂಬಲದಿಂದ ಹೋರಾಟಗಳನ್ನು ನಡೆಸುತ್ತಾ ಮುಂಚೂಣಿಯಲ್ಲಿರುತ್ತಿದ್ದರು. ಸಿದ್ದಲಿಂಗಯ್ಯನವರ ಹೋರಾಟದ ಸಂದರ್ಭಗಳು ಎಲ್ಲಾ ಕಾಲಕ್ಕೂ ಅನ್ವಯಹಾಗೂ ಸಾರ್ವಜನಿಕ ಸತ್ಯಗಳನ್ನು ತೆರೆದಿಡುತ್ತವೆ. ಹೋರಾಟಗಳು ನಿಲ್ಲಬಾರದು. ನಿಂತರೆ ದಮನಿತ ಸಮುದಾಯಗಳಿಗೆ ಉಳಿಯಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಹಾಗೂ ಹೋರಾಟಗಳು ನಿರಂತರ ಮುಂದುವರೆಯುತ್ತಲೇ ಇರಬೇಕು. ನಮ್ಮ ಹಕ್ಕು ಸೌಲಭ್ಯಗಳಿಗಾಗಿ ಹೋರಾಟ ನಡೆಸಲೇಬೇಕೆಂದು ತಿಳಿಸಿದ್ದಾರೆ. ಡಾ. ಸಿದ್ದಲಿಂಗಯ್ಯನವರಿಗೆ ಹೋರಾಟಗಳ ಮೂಲಕ ಹಲವು ಬಡ ಸಮುದಾಯಗಳಿಗೆ ಸಮಾನತೆ ಸೌಲಭ್ಯಗಳನ್ನು ಒದಗಿಸುವುದೇ ಪರಮ ಗುರಿಯಾಗಿತ್ತು. ಅವರಿಗೆ ಬಡವರ ಬಗೆಗಿನ ಕಾಳಜಿ ಇಲ್ಲದೆ ಹೋಗಿದ್ದರೆ ಎಷ್ಟೋ ಬಡ ಸಮುದಾಯಗಳು ಸಾವಿನಂಚಿನಲ್ಲಿ ಸಾಗಬೇಕಾಗುತ್ತಿತ್ತು.

ದೊಡ್ಡಬಳ್ಳಾಪುರದಲ್ಲಿ ನಡೆದ ದಲಿತರ ಸಮಾವೇಶದಲ್ಲಿ ಡಾ. ಸಿದ್ದಲಿಂಗಯ್ಯನವರು ಮುಖ್ಯ ಅತಿಥಿಯಾಗಿದ್ದರಿಂದ ಕಾರ್ಯಕರ್ತರೆಲ್ಲರೂ

ಲೇಖಕರನ್ನು ಮೆರವಣಿಗೆಯ ಮುಂಚೂಣಿಯಲ್ಲಿರಬೇಕೆಂದು ತಿಳಿಸುತ್ತಾರೆ. ಆದರೆ ಲೇಖಕರು ತಾನೂ ಜನಸಾಮಾನ್ಯರೊಡನೆ ಮೆರವಣಿಗೆಯೊಂದಿಗೆ ಬರುವುದಾಗಿ ತಿಳಿಸುತ್ತಾರೆ. ಈ ಧೋರಣೆ ಲೇಖಕರಲ್ಲಿ ಇದ್ದಂತಹ ಸಮಾನತೆಯನ್ನು ಎತ್ತಿ ತೋರಿಸುತ್ತದೆ. 'ಮೆರವಣಿಗೆಯಲ್ಲಿದ್ದ ಗಂಡಸರು, ಹೆಂಗಸರು, ಮಕ್ಕಳೆಲ್ಲರೂ ಎಲ್ಲಾ ಜಾತಿಯ ಬಡವರು ದಲಿತರು' ಎಂಬಂತೆ ಘೋಷಣೆಯನ್ನು ಮಾಡುತ್ತಾರೆ. ಲೇಖಕರು ತಾವು ಬರೆದ ಹೋರಾಟದ ಕವಿತೆಗಳು ಹಾಡಿನ ರೂಪವನ್ನು ಪಡೆಯುತ್ತವೆ ಹಾಗೂ ಕ್ರಾಂತಿ ಗೀತೆಗಳಾಗಿ ಹೊರಹೊಮ್ಮುತ್ತವೆ. ಲೇಖಕರು ಹೋರಾಟದ ಮೆರವಣಿಗೆಯಲ್ಲಿ ಸಾಮಾನ್ಯ ವ್ಯಕ್ತಿಯಂತೆಯೇ ನಡೆದುಕೊಳ್ಳುತ್ತಾರೆ. ಮೆರವಣಿಗೆಯಲ್ಲಿದ್ದ ಹೆಂಗಸೊಬ್ಬಳು ಒಂದು ವರ್ಷದ ಮಗುವನ್ನೆತ್ತಿಕೊಂಡು ನಡೆದು ಹೋಗುವುದು ಸಾಕಾಗಿದ್ದರಿಂದ ಮಗುವನ್ನು ಎತ್ತಿಕೊಳ್ಳುವಂತೆ ಲೇಖಕರಿಗೆ ತಿಳಿಸಿದಾಗ ಲೇಖಕರು ಮುಜುಗರವಿಲ್ಲದೆ ಬೇಸರವಿಲ್ಲದೆ ಆ ಮಗುವನ್ನು ತಾವೇ ಎತ್ತಿಕೊಂಡು ಮುಂದೆ ಸಾಗುತ್ತಾರೆ. ಇಂತಹ ಪ್ರಸಂಗದಲ್ಲಿ ಲೇಖಕರ ವ್ಯಕ್ತಿತ್ವ ಅವಿಸ್ಮರಣೀಯವಾದುದ್ದು. ಡಾ. ಸಿದ್ದಲಿಂಗಯ್ಯನವರು ಬೂಸಾ ಚಳುವಳಿಯ ನಾಯಕರಾದ ಬಿ.ಬಸವಲಿಂಗಪ್ಪನವರಿಗೆ ಬೂಸಾ ಚಳುವಳಿಗೆ ಸ್ವತಃ ತಾವೇ ಶಕ್ತಿಯನ್ನು ನೀಡುತ್ತಾರೆ. ಬಲಿಷ್ಟವಾದ ಭಾಷಣಗಳನ್ನು ಮಾಡುತ್ತಲೇ ಬಸವಲಿಂಗಪ್ಪನವರಿಗೆ ಬೆಂಗಾವಲಾಗಿ ನಿಲ್ಲುತ್ತಾರೆ. ಬಸವಲಿಂಗಪ್ಪನವರು ಹೇಳಿದ ಕನ್ನಡ ಸಾಹಿತ್ಯದಲ್ಲಿ ಬಹುಪಾಲು ಬೂಸಾ ಇದೆ ಎಂಬುದನ್ನು ಮೇಲ್ವರ್ಗದ ಜನರು ಖಂಡಿಸಲು ಬಂದಾಗ ಸಿದ್ದಲಿಂಗಯ್ಯನವರು ಬಸವಲಿಂಗಪ್ಪನವರ ಪರವಾಗಿ ನಿಂತು ಅವರ ಮಾತಿನಲ್ಲಿ ಕಿಂಚಿತ್ತೂ ತಪ್ಪಿಲ್ಲವೆಂದು ವಾದಿಸಿ ಚಳುವಳಿಗೆ ಪ್ರೋತ್ಸಾಹ ನೀಡುತ್ತಾರೆ.

ಬೆಂಗಳೂರಿನ ವಿದ್ಯಾರ್ಥಿನಿಲಯದಲ್ಲಿ ಮುನ್ನೂರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು ಕಾರಣಾಂತರಗಳಿಂದ ಪರಸ್ಪರ ವಿದ್ಯಾರ್ಥಿಗಳಲ್ಲಿ ಜಗಳ ಪ್ರಾರಂಭವಾಗುತ್ತದೆ. ಈ ಸಮಸ್ಯೆಯನ್ನು ಜನ್ನಿ ಅವರು ನಿವಾರಿಸುವಲ್ಲಿ ಮುಂದಾಗುತ್ತಾರೆ. ಆಗಿನ ಶಾಸಕರಾಗಿದ್ದ ಪ್ರೊ.ಎಸ್.ಎಸ್.ಅರಿಕೇರಿಯವರನ್ನು ಹೋರಾಟಕ್ಕೆ ಬೆಂಬಲಕೊಡುವಂತೆ ವಿದ್ಯಾರ್ಥಿಗಳು ಒತ್ತಾಯಿಸುತ್ತಾರೆ. ಎಸ್. ಎಫ್.ಐ ಮತ್ತು ಡಿವೈಎಫ್ಐ ಸಂಘಟನೆಗಳ ಬೆಂಬಲವನ್ನು ಪಡೆದ ವಿದ್ಯಾರ್ಥಿಗಳು ನಿರಂತರವಾಗಿ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಜನ್ನಿಯವರು ಹಾಗೂ ಸಿದ್ದಲಿಂಗಯ್ಯನವರು ವಿದ್ಯಾರ್ಥಿ ಹೋರಾಟಕ್ಕೆ ಬೆಂಬಲ ಸೂಚಿಸಿ ರಾಜ್ಯವ್ಯಾಪಿ ಹೋರಾಟನಡೆಸಬೇಕೆಂದು ಅವಕಾಶವನ್ನು ನೀಡುತ್ತಾರೆ. ಇದರಿಂದ ಹೋರಾಟ ಬಲಿಷ್ಠವಾದಾಗ ವಿದ್ಯಾರ್ಥಿಗಳು ವಸತಿ ಊಟದ ಕೊರತೆಯಿಂದ ಬಳಲುತ್ತಿರುತ್ತಾರೆ.

ಆಗ ಹೋರಾಟದ ನೇತಾರರಾದ ಡಾ. ಸಿದ್ದಲಿಂಗಯ್ಯನವರು ಹೋರಾಟದಲ್ಲಿರುವ ವಿದ್ಯಾರ್ಥಿಗಳಿಗೆ ಹಸಿವನ್ನು ನೀಗಿಸಲು ಗಲ್ಲಿ ಗಲ್ಲಿಯಲ್ಲಿ ರಾತ್ರಿ ಪಾಠಶಾಲೆಗಳನ್ನು ಪ್ರಾರಂಭಿಸುತ್ತಾರೆ. ಹೋರಾಟಕ್ಕೆ ಬೆಂಬಲ ನೀಡಿದ ಸಿದ್ದಲಿಂಗಯ್ಯನವರು ಶಾಲೆಗಳ ಅಕ್ಕ ಪಕ್ಕದ ಮನೆಯವರಿಂದ ಬಟ್ಟೆ ಮತ್ತು ಆಹಾರವನ್ನು ಸಹಾಯವಾಗಿ ಪಡೆದು ವಿದ್ಯಾರ್ಥಿಗಳಿಗೆ ನೀಡುವ ಮೂಲಕ ಅವರ ಸಂಕಟವನ್ನು ಪರಿಹರಿಸಿ ಹೋರಾಟ ಮತ್ತಷ್ಟು ಕಾವು ಪಡೆಯಲು ಕಾರಣರಾಗುತ್ತಾರೆ. ಹಸಿವಿನ ಅನುಭವವಿದ್ದ ಡಾ. ಸಿದ್ದಲಿಂಗಯ್ಯನವರು ವಿದ್ಯಾರ್ಥಿಗಳಲ್ಲಿ ಹೋರಾಟದ ಅವಶ್ಯಕತೆಯ ಅರಿವನ್ನು ಮೂಡಿಸಿದ್ದರಿಂದ ಹೋರಾಟದ ನೆಲೆಗಳು ವಿದ್ಯಾರ್ಥಿಗಳಲ್ಲಿ ಮೂಡಲು ಸಾಧ್ಯವಾಯಿತು. ಲೇಖಕರಿಗೆ ಸೌಲಭ್ಯಗಳನ್ನು ಪಡೆಯಬೇಕಾದರೆ ಹೋರಾಟವೇ ಮದ್ದು ಎಂಬ ಗಾಢವಾದ ನಂಬಿಕೆಯಿತ್ತು. ಇಲ್ಲದಿದ್ದರೆ ದಲಿತರು ಬಡ ಜೀವಿಗಳು ಯಾವ ಕಾಲಕ್ಕೂ ಸೌಲಭ್ಯಗಳಿಂದ ವಂಚಿತರಾಗಿಯೇ ಇರಬೇಕಾಗುತ್ತಿತ್ತು ಎಂಬುದನ್ನು ಅರಿತಿದ್ದರು. ಹಾಗಾಗಿ ಸಿದ್ದಲಿಂಗಯ್ಯನವರ ಬದುಕಿನಲ್ಲಿ ಹೋರಾಟವೇ ಮೊದಲ ಅಸ್ತ್ರ ಎಂಬುದನ್ನು ಅರಿಯಬಹುದಾಗಿದೆ. ಡಾ. ಸಿದ್ದಲಿಂಗಯ್ಯನವರು ಗೆಳೆಯರೊಡನೆ ದಲಿತ ಸಂಘರ್ಷ ಸಮಿತಿಯನ್ನು ಸ್ಥಾಪಿಸುತ್ತಾರೆ. ಚಿಕ್ಕಮಗಳೂ–ರಿನಲ್ಲಿ ಕ್ಯಾಂಪನ್ನು ಏರ್ಪಡಿಸಿದ್ದು ಆ ವೇಳೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಬ್ಬ ದಲಿತರ ಮೇಲೆ ಹಲ್ಲೆ ನಡೆದಿದೆಯೆಂದು ತಿಳಿಯುತ್ತಾರೆ.ಲೇಖಕರು ಹಲ್ಲೆಗೊಂಡ ವ್ಯಕ್ತಿಯ ಮನೆಗೆ ತಾವೇ ನೇರವಾಗಿ ಧಾವಿಸಿ ಸಾಂತ್ವನವನ್ನು ನೀಡುತ್ತಾರೆ. ಸಂಘಟನೆಯನ್ನು ಬಲಪಡಿಸಿ ಹೋರಾಟವನ್ನು ಸದೃಢಗೊಳಿಸುತ್ತಾರೆ. 'ಊರುಕೇರಿ' ಆತ್ಮಚರಿತ್ರೆಯಲ್ಲಿ ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಹೋರಾಟ ಮಾಡುವುದು ಅತ್ಯಂತ ಅಗತ್ಯವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ದಲಿತರಿಗೆ ದೇವಾಲಯ ಪ್ರವೇಶ ಮಾಡಬೇಕೆಂದು ಹಿರಿಯ ನಾಯಕರೆಲ್ಲಾ "ನೀವೆಲ್ಲಾ ಹೀಗೆ ಕುಳಿತರೆ ಆಗುವುದಿಲ್ಲ ಎದ್ದೇಳಿ, ಹಿಟ್ಟಿನ ದೊಣ್ಣೆ ಹಿಡಿದು ನುಗ್ಗಿ ಆ ಊರಿನ ದೇವಸ್ಥಾನಕ್ಕೆ ನುಗ್ಗಿ" ಎಂಬಂತೆ ಹೋರಾಟದ ಆವೇಶಗಳನ್ನು ಮೂಡಿಸುತ್ತಾರೆ. ಅಲ್ಲಿನ ನಾಯಕರು ಗಂಡಸರನ್ನು ಕುರಿತು ಮಹಿಳೆಯರೆಲ್ಲರೂ ಹೋರಾಟಕ್ಕೆ ಅಣಿಯಾಗಿರುವಾಗ ಗಂಡಸರು ಏನು ಮಾಡುತ್ತಿದ್ದೀರಿ? ನೀವೇನು ಬಳೆ ತೊಟ್ಟಿದ್ದೀರಾ? ಎಂಬ ಆವೇಶಪೂರಿತ ಮಾತುಗಳನ್ನು ಆಡುತ್ತಾರೆ. ಇದನ್ನು ಆಲಿಸಿದ ದಲಿತರೆಲ್ಲರೂ ದೇವಾಲಯ ಪ್ರವೇಶವನ್ನು ಮಾಡುತ್ತಾರೆ. ಇದರಿಂದ ಕುಪಿತರಾದ ದಲಿತೇತರರು ದಲಿತರೊಡನೆ ಹೋರಾಟಕ್ಕೆ ಇಳಿಯುವುದನ್ನು ಕಂಡ ಲೇಖಕರು ಯಾವುದೇ ಘರ್ಷಣೆ ಆಗದಂತೆ ಅವರಿಬ್ಬರ ನಡುವೆ ರಾಜಿ ಮಾಡಿಸಲು ತಾವೇ ಮುಂದಾಗುತ್ತಾರೆ. ಹೊಡೆದಾಟದಿಂದ ದುರ್ಬಲರಿಗೆ ತೊಂದರೆಯಾಗುತ್ತದೆ

ಎಂಬುದನ್ನು ಅರಿತ ಸಿದ್ದಲಿಂಗಯ್ಯನವರು ಟೆಂಪೋದಲ್ಲಿ ಪ್ರಯಾಣ ಬೆಳೆಸುತ್ತಾರೆ. ಊರೊಳಗೆ ನುಗ್ಗುತ್ತಿದ್ದ ದಲಿತರನ್ನು ಸಮಾಧಾನಪಡಿಸುತ್ತಾರೆ. ಲೇಖಕರ ದೃಷ್ಠಿಯಲ್ಲಿ ಹೋರಾಟವು ಅತ್ಯಂತ ಮುಖ್ಯವಾದುದ್ದಾಗಿದೆ. ಆದರೆ ಯಾವುದೇ ಪ್ರಾಣಹಾನಿ ಅನಾಹುತಗಳು ನಡೆಯಬಾರದೆಂಬುದೇ ಲೇಖಕರ ಉದ್ದೇಶವಾಗಿರುತ್ತದೆ. ಹಾಗಾಗಿ ರಕ್ತಪಾತವಾಗದ ರೀತಿಯಲ್ಲಿ ಜಾತಿ ಜಾತಿಗಳ ನಡುವಿನ ವೈಷಮ್ಯಗಳನ್ನು ಹೋಗಲಾಡಿಸಿ ಬಾಂಧವ್ಯವನ್ನುಂಟುಮಾಡುತ್ತಾರೆ. ಅವರು ನಡೆಸಿದ ಎರಡು ಗುಂಪುಗಳ ರಾಜಿ ಇಂದಿಗೂ ಅವಿಸ್ಮರಣೀಯ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಳ್ಳಿಯೊಂದರಲ್ಲಿ ದಲಿತರ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಲೇಖಕರು ಹಲ್ಲೆ ಮಾಡಲು ಬಂದ ದಲಿತರನ್ನು ಕಂಡು ಘರ್ಷಣೆಯನ್ನು ಮಾಡುವ ಉದ್ದೇಶವಿಲ್ಲವೆಂದು ತಿಳಿಸುವುದರೊಂದಿಗೆ ಹೋರಾಟವು ಪ್ರಾಣಹಾನಿಯಾಗದ ರೀತಿಯಲ್ಲಿ ನಡೆಯಬೇಕೆಂಬಂತೆ ಹಿತನುಡಿಗಳನ್ನು ನುಡಿಯುತ್ತಾರೆ. ಎಲ್ಲಾ ಕಾಲದಲ್ಲೂ ದಲಿತರು ದಲಿತೇತರರು ಎಂಬ ಭೇದವಿಲ್ಲದಂತೆ ಜೀವಿಸಲಿ ಎಂಬ ಸಮಾನ ಧೋರಣೆಯೆ ಅವರದ್ದಾಗಿರುತ್ತದೆ.

ಸೆಂಟ್ರಲ್ ಕಾಲೇಜಿನಲ್ಲಿ ಪುಂಡರಿಗೂ ಇರಾನಿ ವಿದ್ಯಾರ್ಥಿಗಳ ನಡುವೆ ಘರ್ಷಣೆಯುಂಟಾಗುತ್ತದೆ. ಏಕಾಏಕಿ ರೌಡಿಗಳು ಇರಾನಿ ವಿದ್ಯಾರ್ಥಿಗೆ ಹೊಡೆಯುತ್ತಾರೆ. ತನ್ನ ಇರಾನಿ ವಿದ್ಯಾರ್ಥಿಗಳು ಬಳಗದ ಸಮೇತ ಪ್ರಾಂಶುಪಾಲರ ಕೊಠಡಿಯ ಬಳಿ ಧಾವಿಸುತ್ತಾರೆ. ಸೈನಿಕರಂತೆ ನಿಂತಿದ್ದ ರೌಡಿಗಳು ಆಯುಧಗಳನ್ನಿಡಿದು ಹೆದ–ರಿಕೊಂಡು ಹಿಂದೋಡುತ್ತಾರೆ. ಲೇಖಕರು ವಿದ್ಯಾರ್ಥಿಗಳು ಅಧ್ಯಯನಶೀಲರಾಗಿ ಜ್ಞಾನಾರ್ಜನೆಯಲ್ಲಿ ತೊಡಗಬೇಕು. ಸಮಾಜದಲ್ಲಿ ನಡೆಯುತ್ತಿರುವ ದೌರ್ಜನ್ಯ ದಬ್ಬಾಳಿಕೆಯ ಅರಿವನ್ನು ತಿಳಿದವರಾಗಿರಬೇಕು. ಸಾಮಾಜಿಕ, ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡಿರಬೇಕು ಎಂಬುದನ್ನು ಸಿದ್ದಲಿಂಗಯ್ಯನವರು ತಮ್ಮ ಊರುಕೇರಿ ಆತ್ಮಕಥೆಯಲ್ಲಿ ವ್ಯಕ್ತಪಡಿಸಿದ್ದಾರೆ. ಹೋರಾಟದಲ್ಲಿ ವಿದ್ಯಾರ್ಥಿಗಳ ಪಾತ್ರ ಅತೀ ಮುಖ್ಯ. ಆದರೆ ವಿದ್ಯಾರ್ಥಿಗಳು ಸಂಘರ್ಷಕ್ಕೆ ಒಳಗಾಗುವುದು ಉಚಿತವಲ್ಲ ಎನ್ನುವುದೇ ಲೇಖಕರ ಅಭಿಪ್ರಾಯ. ವಿದ್ಯಾರ್ಥಿ ವಿದ್ಯಾರ್ಥಿಗಳ ಹೊಡೆದಾಟದಿಂದ ಸಮಾಜವು ಶಾಂತಿಯನ್ನು ಕಳೆದುಕೊಳ್ಳುತ್ತದೆ. ಇಂದಿಗೂ ಕೂಡ ಸಿದ್ದಲಿಂಗಯ್ಯರಂತಹ ವಿದ್ವಾಂಸರು ಹೋರಾಟ ಮಾಡುವ ಕರೆಯನ್ನು ಕೊಟ್ಟಿದ್ದಾರೆ. ವಿದ್ಯಾರ್ಥಿಗಳು ಲೇಖಕರ ಮಾತುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಸೂಕ್ತ. 12 ನೇ ಶತಮಾನದ ಶಿವ ಶರಣರು ವಚನಗಳ ಮೂಲಕ ಪ್ರತಿಪಾದಿಸಿದಂತೆ

**ಇವನಾರವ ಇವನಾರವ**
**ಇವನಾರವನೆಂದೆನಿಸದಿರಯ್ಯಾ**
**ಇವ ನಮ್ಮವ ಇವ ನಮ್ಮವ**
**ಇವ ನಮ್ಮವನೆಂದೆನಿಸಯ್ಯಾ**
**ಕೂಡಲಸಂಗಮದೇವಯ್ಯ**
**ನಿಮ್ಮ ಮನೆಯ ಮಗನೆಂದೆನಿಸಯ್ಯ**
**(ಬಸವಣ್ಣ)**

ಎಂಬಂತೆ ನಡೆಸಬೇಕಾಗಿದೆ ಎಂದಿದ್ದಾರೆ. ಜಾತಿಯನ್ನು ನಾಶ ಮಾಡಬೇಕು ಹಾಗೂ ಸಮಾನತೆಯನ್ನು ಪಾಲಿಸುವಂತೆ ಎಲ್ಲರಲ್ಲಿ ಚಿಂತನ ಮಂಥನಗಳನ್ನು ಬಿತ್ತುತ್ತಾ ಶಿವ ಶರಣರು ಕಾಯಕ ತತ್ವ ಮತ್ತು ಶಾಂತಿಯುತ ಸಮಾಜವನ್ನು ನಿರ್ಮಿಸ ಬೇಕೆಂದು ತಿಳಿಸಿದ್ದಾರೆ. ಇಂತಹ ನೆಲೆಗಳೆ ಸಿದ್ದಲಿಂಗಯ್ಯನವರ ಸಾಹಿತ್ಯದ ಮುಖ್ಯ ಧೋರಣೆಗಳಾಗಿವೆ. ಸಿದ್ದಲಿಂಗಯ್ಯನವರು ಚಳುವಳಿಗಳಲ್ಲಿ ತಮ್ಮದೇ ಆದ ಚಿಂತನಾಸಹಿತ ವಿಚಾರಗಳನ್ನು ಮಂಡಿಸಿರುವ ಅಭಿಪ್ರಾಯಗಳನ್ನು ಕಾಳೇಗೌಡ ನಾಗವಾರರು ಒಪ್ಪಿಕೊಂಡಿರುವುದು ಸಿದ್ದಲಿಂಗಯ್ಯನವರಿಗೆ ಇರುವ ಹೋರಾಟದ ಪ್ರಾಮುಖ್ಯತೆಯನ್ನು ಧ್ವನಿಸುತ್ತದೆ. ಸಿದ್ದಲಿಂಗಯ್ಯನವರಿಗೆ ಹಲವಾರು ರೀತಿಯಲ್ಲಿ ಕಾಳೇಗೌಡ ನಾಗವಾರ ಅವರು ಸಹಾಯಹಸ್ತ ನೀಡಿದ್ದಾರೆ ಹಾಗೂ ವೈಚಾರಿಕ ನೆಲೆಗಳ ಕಡೆಗೆ ಹೆಚ್ಚು ಒತ್ತನ್ನು ನೀಡಿದ್ದಾರೆ ಎಂಬುದನ್ನು ನೆನೆಸಿಕೊಂಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ವಿದ್ಯಾರ್ಥಿಯಾಗಿದ್ದಾಗ ಸಿದ್ದಲಿಂಗಯ್ಯನವರು ಕಾಳೇಗೌಡರೊಂದಿಗೆ ಚಿತ್ರ ನಿರ್ದೇಶಕರನ್ನು ಕರೆದುಕೊಂಡು ವಿಧಾನಸೌಧಕ್ಕೆ ತೆರಳಿರುತ್ತಾರೆ. ಆಗ ವಿಧಾನಸೌಧದೊಳಗೆ ಪ್ರವೇಶ ಮಾಡುವವರ ಬ್ಯಾಗುಗಳನ್ನು ಪರಿಶೀಲಿಸುವ ಪದ್ದತಿ ಕಡ್ಡಾಯವಾಗಿತ್ತು. ಆಗ ಕಾಳೇಗೌಡರು ತಮ್ಮ ಟಿಫನ್ ಕ್ಯಾರಿಯನ್ನು ರಭಸವಾಗಿ ಬಿಚ್ಚಿ ತೆಗೆದು ತೋರಿಸುತ್ತಾ ಮಾರಣಾಂತಿಕ ಆಯುಧಗಳಿಲ್ಲವೆಂದೂ ತಮ್ಮ ಸತ್ಯವನ್ನು ಮುಖಕ್ಕೆ ರಾಚುವಂತೆ ಪ್ರದರ್ಶಿಸುತ್ತಾರೆ. ಹಾಗೆಯೇ ವಿಧಾನಸೌಧದೊಳಗೆ ಪ್ರವೇಶವನ್ನು ಪಡೆಯುತ್ತಾರೆ. ಯಾರಲ್ಲಿ ನೈತಿಕತೆ ಸತ್ಯವಂತಿಕೆ ಇರುತ್ತದೋ ಅಂತಹವರು ಎಂದೂ ಕೂಡ ತಮ್ಮ ನೈತಿಕತೆಯನ್ನು ಬಿಟ್ಟುಕೊಡಲಾರರು ಎಂಬುದಕ್ಕೆ ಈ ಪ್ರಸಂಗವು ಸಾಕ್ಷಿಯಾಗಿದೆ. ಯಾರು ಹೋರಾಟಗಳಲ್ಲಿ ಭಾಗವಹಿಸುವ ಆತ್ಮಸ್ಥೈರ್ಯವನ್ನು ಹೊಂದಿರುತ್ತಾರೋ ಅವರು ಯಾವ ಅಧಿಕಾರಿಗಳನ್ನೂ ಬೇಕಾದರೂ ಎದುರಿಸಬಹುದೆಂಬ ನಿಜಸತ್ಯವನ್ನು ಸಿದ್ದಲಿಂಗಯ್ಯನವರು ಊರುಕೇರಿಯಲ್ಲಿ ಅಭಿವ್ಯಕ್ತಿಪಡಿಸಿದ್ದಾರೆ. ಹೋರಾಟದ ಗುರಿ ಸತ್ಯವನ್ನು ಹೊರಸೂಸಿ ನ್ಯಾಯವನ್ನು ಪಡೆಯುವುದಾಗಿದೆ. ಲೇಖಕರಿಗೆ

ಹೋರಾಟದ ಕಿಚ್ಚು ಇದ್ದಿದ್ದರಿಂದ ಸೌಲಭ್ಯಗಳು ಎಲ್ಲರಿಗೂ ದೊರೆತು ಜಾಗತಿಕ ಮಟ್ಟದಲ್ಲಿ ಖ್ಯಾತಿಗಳಿಸಲು ಕಾರಣವಾಯಿತು. ಅವರು ನಡೆಸಿದ ಹೋರಾಟಗಳಲ್ಲಿ ಅವರ ಸ್ವರಚಿತ ಕ್ರಾಂತಿಗೀತೆಗಳೇ ಘೋಷವಾಕ್ಯಗಳಾಗಿ ಜನಮಾನಸದಲ್ಲಿ ಸ್ಥಿರವಾಗಿ ಉಳಿದವು. ಅವರು ಹೋರಾಟ ಮತ್ತು ಕಾವ್ಯದ ಮೂಲಕವೇ ಜನಪ್ರಿಯರಾಗಿ ಸಾಮಾನ್ಯ ಜನರಿಗೆ ಹಲವಾರು ರೀತಿಯಲ್ಲಿ ನ್ಯಾಯ ಮತ್ತು ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಹೋರಾಟ "ಆ ಜನ್ಮ ಸಿದ್ದ ಹಕ್ಕು" ಎಂಬಂತೆ ಶೋಷಿತರು ಅರಿತುಕೊಂಡು ಹೋರಾಟವನ್ನು ಮಾಡಿದಾರೆ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯ ಎಂಬುದನ್ನು ಲೇಖಕರು ತಮ್ಮ ಊರುಕೇರಿ–2 ರಲ್ಲಿ ಹೋರಾಟದ ಸಂದರ್ಭಗಳಲ್ಲಿ ಧ್ವನಿಗೂಡಿಸಿದ್ದಾರೆ. ಭಾಗ–2 ರ ಊರುಕೇರಿ ಆತ್ಮಚ–ರಿತ್ರೆಯಲ್ಲಿ ಡಾ. ಸಿದ್ದಲಿಂಗಯ್ಯನವರು ಬದುಕಿನಲ್ಲಿ ನಡೆಯುವ ಅವಮಾನಗಳು, ಬಡತನದ ಸಂಕಷ್ಟಗಳು, ಶೋಷಣೆಗಳಿಂದ ಹೇಗೆ ಜನಸಾಮಾನ್ಯರು ಅವುಗಳಿಂದ ಹೇಗೆ ಪಾರಾಗಬಹುದೆಂಬುದನ್ನು ವ್ಯಕ್ತಪಡಿಸುತ್ತಾರೆ. ಲೇಖಕರು ಗೆಳೆಯರ ಗುಂಪನ್ನು ನಿರ್ಮಿಸಿ ಅದರ ಮೂಲಕ ಅನೇಕಾನೇಕ ಹೋರಾಟಗಳಲ್ಲಿ ಪಾಲ್ಗೊಂಡು ಧಿಕ್ಕಾರಗಳನ್ನು ಕೂಗುತ್ತಾರೆ. ಊರುಕೇರಿಯಲ್ಲಿ ಬಂಡಾಯದ ಪ್ರಸಂಗಗಳನ್ನು ನಿರೂಪಿಸುವುದರೊಂದಿಗೆ ಓದುಗರಲ್ಲೂ ಹೋರಾಟದ ನೆಲೆಗಳನ್ನು ಒಡಮೂಡಿಸಿದ್ದಾರೆ.

ಊರುಕೇರಿ ಆತ್ಮಚರಿತ್ರೆಯೂ ಹೋರಾಟಗಳ ಪಯಣ ಹಾಗೂ ಸಾರ್ವಕಾಲಿಕ ಮೌಲ್ಯಗಳಾದ ಸಮಾನತೆ, ಶಿಕ್ಷಣ, ಉದ್ಯೋಗ ಸೌಲಭ್ಯಗಳಿಗೆ ಮೊದಲಾದ ಹಿಡಿದ ಕನ್ನಡಿಯಾಗಿದೆ. "ಮಾಡು ಇಲ್ಲವೇ ಮಡಿ" ಎಂಬ ಘೋಷಣೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಊರುಕೇರಿಯ ಓದು ನಮ್ಮನ್ನೆಲ್ಲಾ ಭಾವಪರವಶರನ್ನಾಗಿ ಮಾಡುವುದಲ್ಲದೇ ಹೋರಾಟಕ್ಕೆ ಮುಂದಾಗಬೇಕೆಂಬ ತತ್ವವನ್ನು ಸಾರಿದೆ. ಲೇಖಕರ ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು ಮೊದಲಾದ ಕವನ ಸಂಕಲನಗಳು ಕೂಡ ಹೋರಾಟದ ಅಗತ್ಯತೆಯನ್ನು ತಿಳಿಸುವಲ್ಲಿ ಪ್ರಧಾನ ಪಾತ್ರವಹಿಸಿವೆ. ಹೆಸರೇ ಹೇಳುವಂತೆ ಊರುಕೇರಿ ಕೇವಲ ಸಿದ್ದಲಿಂಗಯ್ಯನವರ ಬದುಕು ಮಾತ್ರವಲ್ಲದೇ ಬದುಕಿನ ಉದ್ದಕ್ಕೂ ಅವರು ಉಂಡ ನೋವು ಹೋರಾಟಗಳ ಅಬ್ಬರ ಹಾಗೂ ಹೋರಾಟಗಳಿಂದ ಚಿಂತಾಜನಕ ಬದುಕನ್ನು ನಡೆಸಿ ತತ್ತರಿಸುತ್ತಿದ್ದ ಶೋಷಿತ ಸಮುದಾಯಗಳ ಪ್ರತಿನಿಧೀಕರಣವಾಗಿದೆ. ಓದುಗರಾದ ನಾವೆಲ್ಲರೂ ನಮ್ಮ ಊರುಕೇರಿಯ ಹೋರಾಟಗಳಲ್ಲಿ ಪಾಲ್ಗೊಳ್ಳುವ ಮನಸ್ಸು ಮಾಡಬೇಕಾಗಿದೆ. ನಮ್ಮ ಉಳಿವಿನ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ಹೋರಾಟವೇ ನಮಗೆ ದಾರಿ.

ಊರುಕೇರಿಯಲ್ಲಿ ಹೋರಾಟಗಳೊಂದಿಗೆ ಬಡವರ ನಗುವಿನ ಶಕ್ತಿಗೆ ಕಾರಣರಾದ ಡಾ. ಸಿದ್ದಲಿಂಗಯ್ಯನವರು ಹೋರಾಟಗಾರರನ್ನು ಬಡಿದೆಬ್ಬಿಸುವ ಲೋಕವನ್ನು ಸೃಷ್ಟಿಮಾಡಿದಂತೆ ತೋರಿದೆ ಎಂದರೆ ಸಂಶಯವಿಲ್ಲ.

ದಲಿತ ಕವಿ, ಬಂಡಾಯ ಸಾಹಿತಿ ಎಂದೇ ಖ್ಯಾತಿಯಾಗಿದ್ದ ಡಾ. ಸಿದ್ದಲಿಂಗಯ್ಯನವರು ಕೆಳವರ್ಗದವರು, ಬಡಪಾಯಿಗಳು ಶೋಷಣೆಯಿಂದ ಬಿಡುಗಡೆಯಾಗಬೇಕಾದರೆ ಎಲ್ಲರೂ ಒಂದುಗೂಡಿ ಹೋರಾಟಕ್ಕಿಳಿಯಬೇಕು, ಕ್ರಾಂತಿಮಾಡಬೇಕು. ಆಗ ಮಾತ್ರ ಶೋಷಿತ ಸಮುದಾಯಗಳು ತಮಗೆ ಸಲ್ಲಬೇಕಾಗಿರುವ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬುದನ್ನು ಜನಮಾನಸದಲ್ಲಿ ಒಡಮೂಡಿಸಿದ್ದಾರೆ. ಡಾ. ಸಿದ್ಧಲಿಂಗಯ್ಯನವರ ಕ್ರಾಂತಿಗೀತೆಗಳನ್ನು ಇಂದಿಗೂ ಹಲವಾರು ಹೋರಾಟಗಳಲ್ಲಿ ಹಾಡುವ ಮೂಲಕ ಹೋರಾಟಗಾರರಲ್ಲಿ ಆವೇಶ ಮತ್ತು ಕಿಚ್ಚನ್ನು ಮೂಡಿಸಲು ಸಾಧ್ಯವಾಗಿದೆ ಎನ್ನುವುದಾದರೆ ಅವರು ಅಂದು ನಡೆಸಿದ ಹೋರಾಟಗಳೇ ಪ್ರೇರಣೆಗಳಾಗಿದೆ ಎಂದರೆ ತಪ್ಪಾಗಲಾರದು. ಹೆಸರೇ ಸೂಚಿಸುವಂತೆ ಸಿದ್ಧಲಿಂಗಯ್ಯ ಎನ್ನುವುದು ಶೋಷಣೆಗೊಳಪಟ್ಟ ಜನರ ಪರವಾಗಿ ಸಿದ್ಧರಾಗಿ ಹೋರಾಟ ಮಾಡುವುದೆಂದೇ ಅರ್ಥೈಸಿಕೊಳ್ಳಬೇಕಾಗಿದೆ. ಲೇಖಕರು ಅಂದು ನಡೆಸಿದ ಹೋರಾಟಗಳಿಂದ ಎಷ್ಟೋ ಬಡ ಕುಟುಂಬಗಳು ಬಡತನದಿಂದ ಹೊರಬಂದಿವೆ. ಅಷ್ಟೇ ಅಲ್ಲದೇ ಡಾ. ಸಿದ್ಧಲಿಂಗಯ್ಯನವರು ಸ್ವತಃ ಬಡ ಜೀವಿಗಳನ್ನು ಗುರುತಿಸಿ ತನುಮನಧನ ಮುಖೇನ ಸಹಾಯವನ್ನು ನೀಡಿದ್ದು, ಹಲವಾರು ಬಡ ವಿದ್ಯಾರ್ಥಿ ಬಳಗವನ್ನು ಬೆಳೆಸಿದ್ದಾರೆ ಎನ್ನುವುದೂ ಸತ್ಯಸಂಗತಿಯಾಗಿದೆ.

**ಆಕರ ಗ್ರಂಥಗಳು:**

1. ಊರುಕೇರಿ–1 (2012), ಡಾ. ಸಿದ್ದಲಿಂಗಯ್ಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
2. ಊರುಕೇರಿ–2 (2009, ದ್ವಿತೀಯ ಮುದ್ರಣ), ಡಾ. ಸಿದ್ದಲಿಂಗಯ್ಯ, ಅಂಕಿತಪುಸ್ತಕ, ಬಸವನಗುಡಿ, ಬೆಂಗಳೂರು.
3. ಹೋರಾಟದ ಹಾದಿ (2015), ಡಾ. ಎಚ್. ನರಸಿಂಹಯ್ಯ, ಅಭಿನವ ಪ್ರಕಾಶನ, ವಿಜಯನಗರ, ಬೆಂಗಳೂರು.